# ಜೀವಪರ ರಂಗೋಲಿ!









**ಶಾಲೆಯ ಕಟ್ಟೆಯ ಮೇಲೆ ಮೆದುಳು, ಹೃದಯ, ಮೂತ್ರಜನಕಾಂಗ, ಜೀರ್ಣಾಂಗವ್ಯೂಹ, ಗಂಡು–ಹೆಣ್ಣಿನ ಸಂತಾನೋತ್ಪತ್ತಿವ್ಯೂಹ, ಸಸ್ಯದ ಪತ್ರಹರಿತ್ತು, ಹೂ, ವಿದ್ಯುಜ್ಜನಕ ಅರಳಿನಿಂತಿದ್ದರೆ ಊರವರ ಕಣ್ಣಲ್ಲಿ ಹೊಸಬೆಳಕು ಮಿನುಗುತ್ತಿತ್ತು.**

■ **ಪ್ರಕಾಶ ಎಸ್. ಮನ್ನಂಗಿ**

**ಕೆ**ಲಸದ ನಿಮಿತ್ತ ಹಿರೇಕೆರೂರು ತಾಲ್ಲೂಕಿನ ಕಚವಿಯ ಬೀದಿಯಲ್ಲಿ ಹಾಯ್ದುಹೋಗುತ್ತಿದ್ದೆ. ಗುಸು ಗುಸು ಮಾತನಾಡಿಕೊಳ್ಳುತ್ತ ಹೆಣ್ಣುಮಕ್ಕಳೆಲ್ಲ ಎಲ್ಲಿಗೋ ದೌಡಾಯಿಸುತ್ತಿದ್ದರು. ಮುಂದೆ ಹೋದಾಗ ಊರ ಮುಖಂಡರ ಗುಂಪು, ಹೆಂಗಳೆಯರ ಗುಂಪು ಅವಸರದಿಂದ ಸಾಗಿಹೋದವು. ಕುತೂಹಲ ತಡೆಯಲಾಗಲಿಲ್ಲ. ನಾನೂ ಅವರನ್ನು ಹಿಂಬಾಲಿಸಿದೆ. ಅರೆ... ಅವರೆಲ್ಲ ಸರಕಾರಿ ಪ್ರೌಢಶಾಲೆಯ ಬಳಿ ನಡೆದರು. ಅಲ್ಲೂ ನೂರಾರು ಪಾಲಕರ, ಜನಪ್ರತಿನಿಧಿಗಳ ಮತ್ತು ವಿದ್ಯಾರ್ಥಿಗಳ ಹಿಂಡು.

(8ನೇ ಪುಟ ನೋಡಿ)